ನೊಂ. ಸಂ : ಯುಬಿಸಿ-3/98/ನೋಂದಣಿ/34547/2004- ದಿ.06-11-2004

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ.

ನಂ. 16, 1ನೇ ಮಹಡಿ, 1ನೇ ಅಡ್ಡ ರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560003

## KARNATAKA STATE CO-OPERATIVE CREDIT SOCIETIES FEDERATION LTD

No. 16, 1st Floor, 1st Cross, Linkroad, Malleshwaram, Bangalore - 560 003.
Phone : 080-23564444/23464033 E-Mail : ksccsfltd@gmail.com

ಅಧ್ಯಕ್ಷರು
ಸಿ.ಎಂ.ಮಾರೇಗೌಡ
Mob : 9448375745

ಉಲ್ಲೇಖ : ಕರಾಸಪಸಂಮ/ 6762/2017-2018 -01- ದಿನಾಂಕ : 16.02.2018

ಗೆ,
ಅಧ್ಯಕ್ಷರು/ಮುಖ್ಯಕಾರ್ಯನಿರ್ವಹಣಾಧಿಕಾರಿಗಳು
-------------------
-------------------

Karnataka State Co-Operative Credit Societies Federation Ltd * Bangalore

ಮಾನ್ಯರೇ,

ವಿಷಯ:-ನಮ್ಮ ಮಹಾಮಂಡಳಕ್ಕೆ ನಿಮ್ಮ ಸಂಘದ ನಿವ್ವಳ ಲಾಭ ವಿಲೇವಾರಿಯಲ್ಲಿ ಶೇ.2ರಷ್ಟನ್ನು ಸಹಕಾರ ಶಿಕ್ಷಣ ನಿಧಿಗೆ ವರ್ಗಾಯಿಸಲು ಉಪನಿಯಮಗಳನ್ನು ತಿದ್ದುಪಡಿ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ:-1. ಕ.ರಾ.ಸ.ಪ.ಸಂ.ಮ.ನಿ/84/2016-17 ದಿನಾಂಕ: 22-04-2016

2. ಕಾಮಧೇನು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು ಇದರ ಉಪನಿಯಮದ ಉದ್ಧೃತ ಭಾಗ.

------***-----

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮ ಗಮನಕ್ಕೆ ತರುವುದೇನೆಂದರೆ ಪತ್ತಿನ ಸಹಕಾರ ಮಹಾಮಂಡಳವು ದಿನಾಂಕ:06.11.2004ರಂದು ನೋಂದಣಿಯಾಗಿದೆ. ಈ ಮಹಾಮಂಡಳವು ಸಹಕಾರ ಸಂಘಗಳ ಕಾರ್ಯಗಳಲ್ಲಿ ಸಮಾನತೆಯನ್ನು ಉಂಟು ಮಾಡುವುದು, ಆಡಳಿತಮಂಡಳಿ ಸದಸ್ಯರು/ಸಿಬ್ಬಂದಿಗಳಿಗೆ ಶಿಕ್ಷಣ ತರಬೇತಿ ನೀಡುವುದು, ಸಹಕಾರದ ಬಗ್ಗೆ ಜಿಲ್ಲಾಮಟ್ಟದಲ್ಲಿ ಮತ್ತು ವಿಭಾಗಮಟ್ಟದಲ್ಲಿ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ತರಬೇತಿ ನೀಡುವುದು, ಇ-ಸ್ಟಾಂಪಿಂಗ್ ವ್ಯವಹಾರ ನಡೆಸಲು ಶಿಫಾರಸ್ಸು ಮಾಡುವುದು, ಸಹಕಾರಿ ಆಂದೋಲನವನ್ನು ಪುಷ್ಟೀಕರಿಸುವುದು, ಸಂಶೋಧನಾತ್ಮಕ ಕಾರ್ಯಗಳನ್ನು ತೆಗೆದುಕೊಳ್ಳುವುದು, ಸಮಸ್ಯೆಗಳನ್ನು ಬಗೆಹರಿಸಲು ಕ್ರಮಗಳನ್ನು ಕೈಗೊಳ್ಳುವುದು ಮುಂತಾದ ಉದ್ದೇಶಗಳನ್ನು ಹೊಂದಿದೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹಣಕಾಸಿನ ನೆರವಿನ ಅವಶ್ಯಕತೆ ಇರುತ್ತದೆ.

2014-15ನೇ ಸಾಲಿನಲ್ಲಿ ಕಾಮಧೇನು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು ಈ ಸಂಘವು ತಮ್ಮ ಸಂಘದ ಉಪನಿಯಮ ಸಂಖ್ಯೆ 109 ರನ್ನು ತಿದ್ದುಪಡಿ ಮಾಡಿ ಸಹಕಾರ ಸಂಘಗಳ ಕಾಯ್ದೆ ಕಲಂ.57 ಹಾಗೂ ನಿಯಮಗಳ 22 ರಲ್ಲಿ ನಮೂದಿಸಿರುವಂತೆ ಆಯಾ ವರ್ಷದಲ್ಲಿ ಸಂಘ ಗಳಿಸಿದ ನಿವ್ವಳ ಲಾಭವನ್ನು ವಿಂಗಡಣೆ ಮಾಡುವಾಗ ಉಪನಿಯಮ ಸಂಖ್ಯೆ 109(2)ರ ಪ್ರಕಾರ ಉಳಿಕೆ ಲಾಭದಲ್ಲಿ ಶೇ.2ರಷ್ಟನ್ನು ಸಹಕಾರ ಶಿಕ್ಷಣ ನಿಧಿಗೆ ತೆಗೆದಿರಿಸತಕ್ಕದ್ದು ಮತ್ತು ಅದನ್ನು ಸಾಮಾನ್ಯ ಸಭೆ ನಡೆದ ದಿನಾಂಕದಿಂದ 30 ದಿನಗಳೊಳಗೆ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳಕ್ಕೆ ಕಳುಹಿಸತಕ್ಕದ್ದು ಎಂಬ ತಿದ್ದುಪಡಿಯನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಇವರು ಅನುಮೋದಿಸಿರುತ್ತಾರೆ.

ಈ ರೀತಿಯಲ್ಲಿ 2015-16ನೇ ಸಾಲಿನಲ್ಲಿ ರೂ. 34,052.00 ಮತ್ತು 2016-17ನೇ ಸಾಲಿನಲ್ಲಿ ರೂ. 23,139.00 ಶಿಕ್ಷಣ ನಿಧಿಯಾಗಿ ಮಹಾಮಂಡಳಕ್ಕೆ ಪಾವತಿ ಮಾಡಿರುತ್ತಾರೆ, ಅಲ್ಲದೆ ಈ ಕೆಳಕಂಡ ಸಹಕಾರ ಸಂಘಗಳು ಮಹಾಮಂಡಳಕ್ಕೆ 2016-17ನೇ ಸಾಲಿನ ಶಿಕ್ಷಣ ನಿಧಿಯನ್ನು ಪಾವತಿಸಿರುತ್ತವೆ.

| ಕ್ರ.ಸಂ | 2016-17ನೇ ಸಾಲಿನಲ್ಲಿ ಶಿಕ್ಷಣ ನಿಧಿ ಪಾವತಿಸಿರುವ | ಮೊತ್ತ |
|---|---|---|
| 01 | ಕಾಮಧೇನು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅ., ಬೆಂಗಳೂರು | 23,139.00 |
| 02 | ಶ್ರೀ ಗಾಯತ್ರಿ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿ ಅ., ಸೂಳೇಭಾವಿ, ಬಾಗಲಕೋಟೆ | 19,730.00 |
| 03 | ಶ್ರೀ ಚೈತನ್ಯ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿ ಅ., ಮೂಡಲಗಿ, ಬೆಳಗಾವಿ | 50,000.00 |
| 04 | ಶ್ರೀ ವೇಮನ ಕೋ-ಆಪ್ ಕ್ರೆಡಿಟ್ ಸೊಸೈಟಿ ಅ., ಮೂಡಲಗಿ, ಬೆಳಗಾವಿ | 10,000.00 |
| 05 | ಶ್ರೀ ಮಹಾಲಕ್ಷ್ಮೀ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿ ಅ., ಮೂಡಲಗಿ, ಬೆಳಗಾವಿ | 25,000.00 |
| 06 | ಶ್ರೀ ನಾಗಲಿಂಗೇಶ್ವರ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿ ಅ., ಮೂಡಲಗಿ, ಬೆಳಗಾವಿ | 5,000.00 |
| 07 | ಸ್ವಾಮಿ ವಿವೇಕಾನಂದ ಪತ್ತಿನ ಸಹಕಾರ ಸಂಘ ನಿ., ತುಮಕೂರು | 5,000.00 |
| 08 | ಶ್ರೀ ಬಸವೇಶ್ವರ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿ ಅ., ಮೂಡಲಗಿ, ಬೆಳಗಾವಿ | 20,000.00 |
| | ಒಟ್ಟು ಶಿಕ್ಷಣ ನಿಧಿ | 1,57,869.00 |

ಈ ಮೂಲಕ ಮಹಾಮಂಡಳವು ಉತ್ತಮವಾಗಿ ಕಾರ್ಯನಿರ್ವಹಿಸಲು ನೆರವು ನೀಡಿರುತ್ತವೆ. ಅದ್ದರಿಂದ ತಮ್ಮ ಸಹಕಾರ ಸಂಘದ ಆಡಳಿತಮಂಡಳಿ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಂಡು ಮುಂದಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಉಪನಿಯಮಗಳನ್ನು ತಿದ್ದುಪಡಿಮಾಡಿಕೊಂಡು ನಮ್ಮ ಮಹಾಮಂಡಳಕ್ಕೆ ಶೇಕಡ 2% ಶಿಕ್ಷಣ ನಿಧಿಯನ್ನು ನೀಡಲು ಹಾಗೂ ತಹಲ್ ವರೆವಿಗೂ ಪ್ರತಿ ವರ್ಷ ದೇಣಿಗೆ ರೂಪದಲ್ಲಿ ಮಹಾಮಂಡಳದ ಶಿಕ್ಷಣ ತರಬೇತಿ ಕಾರ್ಯಕ್ರಮಗಳಿಗೆ ಉಪಯೋಗಿಸಲು ಅನುವಾಗುವಂತೆ ದೇಣಿಗೆ ನೀಡಬೇಕಾಗಿ ಕೋರುತ್ತೇನೆ

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

(ಸಿ.ಎಂ ಮಾರೇಗೌಡ)
ಅಧ್ಯಕ್ಷರು

ಅಡಕ:-1)ಕಾಮಧೇನು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅ., ಬೆಂಗಳೂರು ಇದರ ತಿದ್ದುಪಡಿಯಾಗಿರುವ ಉಪನಿಯಮದ ಪ್ರತಿ.

2) ತಮ್ಮ ಸಂಘವು ಮಾಡಿಕೊಳ್ಳಬೇಕಾದ ಠರಾವಿನ ಮಾದರಿ ಪ್ರತಿ.

ಅಕ್ರಮಗಳನ್ನು ಮತ್ತು ಅವ್ಯವಹಾರಗಳನ್ನು ಗಮನಿಸಿದಾಗ, ಆ ಬಗ್ಗೆ ಕೂಡಲೇ ವಿಶೇಷ ವರದಿಯೊಂದನ್ನು ತಯಾರಿಸಿ ಮುಖ್ಯಕಾರ್ಯನಿರ್ವಾಹಕನಿಗೆ ಸಲ್ಲಿಸತಕ್ಕದ್ದು;

(3) ಸರ್ವಸದಸ್ಯರ ಸಭೆಯು ಹಾಗೂ ನಿಬಂಧಕರ ಸೂಚನೆಗಳನ್ವಯ ಆಗಿಂದಾಗ್ಗೆ ಹೋಕುಬಾಕಿ ಮತ್ತು ಸಂಶಯಾತ್ಮಕ ಸಾಲಗಳನ್ನು ನಿರ್ಧರಿಸುವುದು.

**106. ಆಂತರಿಕ ಲೆಕ್ಕಪರಿಶೋಧಕರನ್ನು ತೆಗೆದು ಹಾಕುವುದು:**

ಆಂತರಿಕ ಲೆಕ್ಕಪರಿಶೋಧಕರು ಪ್ರತಿ ತಿಂಗಳು ಸಂಘದ ಲೆಕ್ಕಗಳನ್ನು ಪರಿಶೋಧಿಸಿ ತಿಂಗಳು ಮುಕ್ತಾಯವಾದ ಹತ್ತು ದಿನಗಳ ಒಳಗೆ ಪರಿಶೋಧನಾ ವರದಿಯನ್ನು ಮುಖ್ಯಕಾರ್ಯನಿರ್ವಾಹಕನಿಗೆ ಸಲ್ಲಿಸತಕ್ಕದ್ದು. ಹಾಗೆ ಸಲ್ಲಿಸಲು ತಪ್ಪಿದ್ದಲ್ಲಿ ಮತ್ತು ಸಕಾರಣಗಳಿಲ್ಲದಿದ್ದಲ್ಲಿ ಮಂಡಲಿಯು ಆ ಲೆಕ್ಕಪರಿಶೋಧಕರಿಗೆ ಸೂಕ್ತ ಸೂಚನೆ ನೀಡಿದ ನಂತರ ಅವನನ್ನು ಆ ಸ್ಥಾನದಿಂದ ತೆಗೆದುಹಾಕಬಹುದು. ಮತ್ತು ಉಳಿದ ಅವಧಿಗೆ ಅವರ ಸ್ಥಾನದಲ್ಲಿ ಅವಶ್ಯವಾದ ಅರ್ಹತೆಯುಳ್ಳ ಹೊಸ ಲೆಕ್ಕ ಪರಿಶೋಧಕರನ್ನು ಸೂಕ್ತ ಸಂಭಾವನೆಯ ಮೇರೆಗೆ ನೇಮಕ ಮಾಡಿಕೊಳ್ಳಬಹುದು

**107. ಮಧ್ಯಂತರದಲ್ಲಿ ತೆರವಾದ ಸ್ಥಾನಗಳು:**

ಯಾರೇ ಲೆಕ್ಕಪರಿಶೋಧಕನ ಮರಣ, ರಾಜೀನಾಮೆ, ಅಥವಾ ಇನ್ನಾವುದೇ ಕಾರಣದಿಂದ ತೆರವಾಗುವ ಸ್ಥಾನಕ್ಕೆ ಮಂಡಲಿಯು ಹೊಸ ಲೆಕ್ಕಪರಿಶೋಧಕನನ್ನು ನೇಮಕ ಮಾಡತಕ್ಕದ್ದು. ಯಾರೇ ಲೆಕ್ಕಪರಿಶೋಧಕನು ಅವಧಿ ಪೂರ್ವ ರಾಜೀನಾಮೆ ನೀಡಿದಲ್ಲಿ, ಅದು ಮಂಡಲಿಯಿಂದ ಅಂಗೀಕೃತವಾದರೆ, ಆ ಸ್ಥಾನವು ತೆರವಾಗಿದೆಯೆಂದು ಭಾವಿಸತಕ್ಕದ್ದು.

**108. ದಾಖಲೆ ಪುಸ್ತಕಗಳಿಗೆ ಪ್ರವೇಶಾಧಿಕಾರ :**

ಲೆಕ್ಕಪರಿಶೋಧಕರು ಸಂಘದ ಎಲ್ಲಾ ದಾಖಲೆಗಳು, ಪುಸ್ತಕಗಳು, ಖಾತೆಗಳು, ಓಚರುಗಳು ಮೊದಲಾದವುಗಳನ್ನು ಬೇಕಾದಾಗ ಪಡೆಯಲು ಮತ್ತು ನಗದು ಶಿಲ್ಕು ಹಾಗೂ ಭದ್ರತೆಗಳನ್ನು ಪರಿಶೀಲಿಸಲು ಅಧಿಕಾರ ಹೊಂದಿರತಕ್ಕದ್ದು. ಲೆಕ್ಕಪರಿಶೋಧಕರು ಸಂಘದ ಲೆಕ್ಕಗಳಿಗೆ ಸಂಬಂದಪಟ್ಟ ಪತ್ರಗಳನ್ನು ಅಥವಾ ದಾಖಲೆಗಳನ್ನು ತರಿಸಿಕೊಳ್ಳಲು ಅಧಿಕಾರ ಹೊಂದಿದ್ದು ಲೆಕ್ಕಪತ್ರ ಗಳ ಪರಿಶೋಧನೆಗೆ ಸಂಬಂಧಿಸಿದಂತೆ ಯಾವುದೇ ಕ್ರಮ / ವ್ಯವಹಾರದ ಬಗ್ಗೆ ವಿಶೇಷ ವರದಿ ತಯಾರಿಸಿ ಸೂಕ್ತ ಕ್ರಮಕ್ಕಾಗಿ ಮಂಡಲಿಗೆ ನೀಡತಕ್ಕದ್ದು. ಸಂಘದ ಕಾರ್ಯ ಹಾಗೂ ವ್ಯವಹಾರಕ್ಕೆ ಸಂಬಂಧಿಸಿದಂತೆ ಪರಿಶೋಧಕರು ಅಪೇಕ್ಷಿಸುವ ಎಲ್ಲಾ ಮಾಹಿತಿಗಳನ್ನು ಒದಗಿಸಲು ಮಂಡಲಿ, ಮುಖ್ಯ ಕಾರ್ಯನಿರ್ವಾಹಕ ಮತ್ತು ಇತರೆ ಅಧಿಕಾರಿಗಳು / ಸಿಬ್ಬಂದಿವರ್ಗದವರು ಬದ್ದರಾಗಿರತಕ್ಕದ್ದು.

**109. ನಿವ್ವಳ ಲಾಭ ವಿಭಜನಾ ಕ್ರಮ :**

ಕಾಯ್ದೆಯ ಕಲಂ 57 ಹಾಗೂ ನಿಯಮಗಳ 22ನೇ ನಿಯಮದಲ್ಲಿ ನಮೂದಿಸಿರುವಂತೆ ಆಯಾ ವರ್ಷದಲ್ಲಿ ಸಂಘಗಳಿಸಿದ ನಿವ್ವಳ ಲಾಭವನ್ನು ಸಾಮಾನ್ಯ ಸಭೆಯಲ್ಲಿ ಘೋಷಿಸತಕ್ಕದ್ದು ಮತ್ತು ಈ ಕೆಳಕಂಡಂತೆ ವಿಂಗಡಣೆ ಮಾಡತಕ್ಕದ್ದು. ನಿವ್ವಳ ಲಾಭವನ್ನು ಈ ಕೆಳಗಿನಂತೆ ವಿಂಗಡಣೆ ಮಾಡುವುದಕ್ಕೆ ಮುಂಚೆ, ಹಿಂದಿನ ವರ್ಷದ ಅಥವಾ ವರ್ಷಗಳಲ್ಲಿನ ಕ್ರೋಢೀಕೃತ ನಷ್ಟವನ್ನು ಈ ನಿವ್ವಳ ಲಾಭದಲ್ಲಿ ವಜಾ ಮಾಡಿ ಉಳಿದ ಲಾಭವನ್ನು ಮಾತ್ರ ವಿಭಜನೆ ಮಾಡತಕ್ಕದ್ದು.

(1) ನಿವ್ವಳ ಲಾಭದ ಕನಿಷ್ಠ ಶೇಕಡ 25 ರಷ್ಟನ್ನು ಮೀಸಲು ನಿಧಿ (ರಿಸರ್ವ್ ಫಂಡ್) ಗೆ ಸೇರಿಸತಕ್ಕದ್ದು.

(2) ಉಳಿದ ಲಾಭದಲ್ಲಿ ಶೇಕಡಾ 2ರಷ್ಟನ್ನು ಸಹಕಾರ ಶಿಕ್ಷಣ ನಿಧಿಗೆ ತೆಗೆದಿರಿಸತಕ್ಕದ್ದು ಮತ್ತು ಅದನ್ನು ಸಾಮಾನ್ಯ ಸಭೆಯು ನಡೆದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಕ್ಕೆ/ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳಕ್ಕೆ ಕಳುಹಿಸತಕ್ಕದ್ದು.

(3) ಜಾತಾ ಉಳಿದ ಲಾಭವನ್ನು ಈ ಕೆಳಕಂಡಂತೆ ವಿನಿಯೋಗಿಸಬಹುದು:

(ಎ) ಶೇಕಡಾ 10ಕ್ಕೆ ಮೀರದ ಮೊಬಲಗನ್ನು ಕರಡು ಸಾಲದ ನಿಧಿಗೆ (ಹೋಕುಬಾಕಿ ನಿಧಿಗೆ)

(ಬಿ) ಶೇಕಡಾ 15ಕ್ಕೆ ಕಡಿಮೆ ಇಲ್ಲದ ಮೊಬಲಗನ್ನು ಕಟ್ಟಡದ ನಿಧಿಗೆ

(ಸಿ) ಶೇಕಡಾ 10ಕ್ಕೆ ಮೀರದ ಮೊಬಲಗನ್ನು ಸದಸ್ಯರ ಕ್ಷೇಮನಿಧಿಗೆ

(ಡಿ) ಶೇಕಡಾ 5ಕ್ಕೆ ಮೀರದ ಮೊಬಲಗನ್ನು ಸಿಬ್ಬಂದಿ ಕ್ಷೇಮನಿಧಿಗೆ

(ಇ) ಶೇಕಡಾ 10ಕ್ಕೆ ಮೀರದ ಮೊಬಲಗನ್ನು ಸಾಮಾಜಿಕ ಕಲ್ಯಾಣ ನಿಧಿಗೆ

(ಎಫ್) ಶೇಕಡಾ 10ಕ್ಕೆ ಮೀರದ ಮೊಬಲಗನ್ನು ಧರ್ಮದ ನಿಧಿಗೆ

(ಜಿ) ಶೇಕಡಾ 2ಕ್ಕೆ ಕಡಿಮೆ ಇಲ್ಲದ ಮೊಬಲಗನ್ನು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ, ಬೆಂಗಳೂರು ಇದರ ಸಹಕಾರ ಅಭಿವೃದ್ಧಿ ನಿಧಿಗೆ

(ಹೆಚ್) ಶೇಕಡಾ 10ಕ್ಕೆ ಮೀರದ ಮೊಬಲಗನ್ನು ಮಹೋತ್ಸವ ನಿಧಿಗೆ (ಜ್ಯುಬಿಲಿ ಫಂಡ್‌ಗೆ)

(ಐ) ಶೇಕಡಾ 10ಕ್ಕೆ ಮೀರದ ಲಾಭಾಂಶ ಸಮೀಕರಣ ನಿಧಿಗೆ

(ಜೆ) ಉಳಿದ ಲಾಭಾಂಶದಲ್ಲಿ ಪ್ರತಿ ಸದಸ್ಯರ ಹೆಸರಿನಲ್ಲೂ ಸಾಲಿನ ಅಖ್ಯೈರಿಗೆ ಇರುವ ಷೇರು ಬಂಡವಾಳದ ಮೇಲೆ ಸಾಮಾನ್ಯ ನಿಕಾಯವು ನಿರ್ಧರಿಸುವ ದರದಲ್ಲಿ ಡಿವಿಡೆಂಡನ್ನು ಪಾವತಿಸಲು

(ಕೆ) ಲಾಭದಲ್ಲಿ ಶೇಕಡಾ 10 ಮೀರದಂತೆ ಜ್ಯೂಬಿಲಿ ಫಂಡಿಗೆ ವಿನಿಯೋಗಿಸಲು ಅವಕಾಶವರತಕ್ಕದ್ದು.

(ಎಲ್) ಈ ಮೇಲಿನೆಲ್ಲವುಗಳನ್ನು ಹಂಚಿ ಉಳಿಯುವ ಮೊಬಲಗನ್ನು ಸಂಘದ ರಿಸರ್ವ್ ಫಂಡಿಗೆ (ಮೀಸಲು ನಿಧಿಗೆ) ಸೇರಿಸತಕ್ಕದ್ದು.

**110. ಡಿವಿಡೆಂಡನ್ನು ಲೆಕ್ಕಹಾಕುವುದು :**

(1) ಸಹಕಾರ ವರ್ಷದ ಒಂದು ತ್ರೈಮಾಸಿಕದಲ್ಲಿ ಸದಸ್ಯರಾಗಿ ಸೇರಿಸಲ್ಪಟ್ಟ ಎಲ್ಲಾ ವ್ಯಕ್ತಿಗಳು ಆ ವರ್ಷ ಉಳಿಕೆ ತ್ರೈಮಾಸಿಕಗಳಿಗೆ ಹೊಂದಿಕೆಯಾದ ಪ್ರಮಾಣದಲ್ಲಿ ಡಿವಿಡೆಂಡನ್ನು ಪಡೆಯಲು ಅರ್ಹರಾಗಿರತಕ್ಕದ್ದು.

(2) ತನ್ನ ಷೇರುಗಳನ್ನು ಬೇರೆಯವರಿಗೆ ವರ್ಗಾಯಿಸಿದ ಸದಸ್ಯನು ಆ ಷೇರುಗಳ ಮೇಲೆ ವರ್ಗಾವಣೆ ಆದ ಸಾಲಿಗೆ ಡಿವಿಡೆಂಡನ್ನು ಪಡೆಯಲು ಅರ್ಹನಲ್ಲ. ಬ್ಯಾಂಕು ಸದಸ್ಯನ ಷೇರುಗಳನ್ನು ಸಾಲ ಮತ್ತು ಇತರೇ ಬಾಕಿಗಳಿಗಾಗಿ ಕಲಂ 35ರ ಅನ್ವಯ ಸರಿಹೊಂದಿಸಿಕೊಂಡಿದ್ದರೆ ಅಂತಹ ಷೇರುಗಳ ಮೇಲೆ ಸರಿಹೊಂದಿಸಿಕೊಂಡ ಸಾಲಿನಲ್ಲಿ, ಡಿವಿಡೆಂಡನ್ನು ಪಾವತಿ ಮಾಡತಕ್ಕದ್ದಲ್ಲ.

**111. ಗತಿಸಿದ ಡಿವಿಡೆಂಡ:**

ಡಿವಿಡೆಂಡನ್ನು ಘೋಷಿಸಿದ ತಾರೀಖಿನಿಂದ 3 ವರ್ಷದ ಒಳಗಾಗಿ, ಯಾರೇ ಸದಸ್ಯನು ಡಿವಿಡೆಂಡನ್ನು ಪಡೆಯದೇ ಇದ್ದರೆ ಅಂತಹ ಸದಸ್ಯನಿಗೆ 3 ತಿಂಗಳ ಒಳಗಾಗಿ ಡಿವಿಡೆಂಡನ್ನು ಪಡೆಯಬೇಕೆಂದು ಮಂಡಲಿಯು ನೋಟಿಸನ್ನು ಕಳುಹಿಸಕೊಡತಕ್ಕದ್ದು ಅಥವಾ ಮಹಾಸಭೆಯ ವರದಿ ಪುಸ್ತಕದಲ್ಲಿ ಪ್ರಕಟಿಸಿರಬೇಕು. ಆ ಅವಧಿಯಲ್ಲೂ ಸದಸ್ಯನು ಡಿವಿಡೆಂಡನ್ನು ಪಡೆಯದೇ ಇದ್ದಲ್ಲಿ, ಆ ಡಿವಿಡೆಂಡ್ ಮೊಬಲಗನ್ನು ಮೀಸಲು ನಿಧಿಗೆ (ರಿಸರ್ವ್ ಫಂಡಿಗೆ) ಜಮಾ ಮಾಡಿಕೊಳ್ಳತಕ್ಕದ್ದು. ಈ ಬೈಲಾ ಉದ್ದೇಶಕ್ಕಾಗಿ ವಾರ್ಷಿಕ ವರದಿಯಲ್ಲಿ ಸೂಚನೆಯನ್ನು ನೀಡಿದರೆ ಸಾಕಾಗುತ್ತದೆ.

**112. ಮೀಸಲು ನಿಧಿ : ಮೀಸಲು ನಿಧಿಯು ಈ ಕೆಳಗಿನ ಮೊಬಲಗುಗಳನ್ನೊಳಗೊಂಡಿರತಕ್ಕದ್ದು :**

(ಎ) ಉಪವಿಧಿ 108.1ರ ಅನುಸಾರವಾಗಿ ಪ್ರತಿ ವರ್ಷ ನಿವ್ವಳ ಲಾಭದಿಂದ ಜಮಾ ಮಾಡಿದ ಮೊಬಲಗು.

(ಬಿ) ಸಂಘದಿಂದ ಮುಟ್ಟುಗೋಲು ಹಾಕಿದ ಷೇರುಗಳ ಮೊತ್ತವಿದ್ದರೆ, ಅಂತಹ ಮೊಬಲಗು

(ಸಿ) ಗತಿಸಿದ ಡಿವಿಡೆಂಡ್ ಮೊಬಲಗು

(ಡಿ) ವಿಲೇವಾರಿಯಾಗದ ಲಾಭ

(ಇ) ದೇಣಿಗೆಗಳಿಂದ ಬರುವ ಮೊಬಲಗು

**113. ಮೀಸಲು ನಿಧಿಯ ಹೂಡಿಕೆ :**

ಹಿಂದಿನ ಸಹಕಾರ ವರ್ಷದ ಅಂತ್ಯದಲ್ಲಿದ್ದ ಮೀಸಲು ನಿಧಿಯನ್ನು ಸಂಬಂಧಪಟ್ಟ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಿ ಅಥವಾ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನಲ್ಲಿ ದೀರ್ಘಾವಧಿ ಠೇವಣಿಯನ್ನಾಗಿ ಅಥವಾ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, 1949(ಎಎಸಿಎಸ್) ರಡಿ ಅನುಮತಿಸಿದ ಭದ್ರತಾ ಪತ್ರಗಳಲ್ಲಿ ಇಡತಕ್ಕದ್ದು. ಸಾಮಾನ್ಯವಾಗಿ ನಿಬಂಧಕರ ಅನುಮತಿಯಿಲ್ಲದೆ ಈ ಮೊಬಲಗನ್ನು

..................................ಸಹಕಾರ ಸಂಘ ನಿ.,

## ಠರಾವಿನ ಮಾದರಿ

ದಿನಾಂಕ:.................................ರಂದು .......................ರವರ ಅಧ್ಯಕ್ಷತೆಯಲ್ಲಿ.......................ರಲ್ಲಿ ನಡೆದ ಆಡಳಿತಮಂಡಳ ಸಭೆಯ ನಡವಳಿಗಳು

**ವಿಷಯ:- ನಮ್ಮ ಸಂಘದ ಉಪನಿಯಮ ಸಂಖ್ಯೆ ..............................ನ್ನು ತಿದ್ದುಪಡಿ ಮಾಡಿಕೊಳ್ಳುವ ಬಗ್ಗೆ.**

ತೀರ್ಮಾನ:-ಈ ಬಗ್ಗೆ ಸಭೆಯು ಸಂಘದ ಉಪನಿಯಮ ....................ಸಂಖ್ಯೆ ಪ್ರಕಾರ ನಿವ್ವಳ ಲಾಭ ವಿಭಜನೆ ಕುರಿತಂತೆ ಈ ಕೆಳಕಂಡಂತೆ ಚರ್ಚಿಸಿತು. ಸಹಕಾರ ಸಂಘಗಳ ಕಾಯ್ದೆ 57 ನಿಯಮ 22ರಲ್ಲಿ ನಮೂದಿಸಿದಂತೆ ಆಯಾ ವರ್ಷದಲ್ಲಿ ಸಂಘ ಗಳಿಸಿದ ನಿವ್ವಳ ಲಾಭವನ್ನು ಸಾಮಾನ್ಯ ಸಭೆಯಲ್ಲಿ ಘೋಷಿಸತಕ್ಕದ್ದು. ಈ ಕೆಳಕಂಡಂತೆ ವಿಂಗಡನೆ ಮಾಡತಕ್ಕದ್ದು.

1. ನಿವ್ವಳ ಲಾಭದ ಕನಿಷ್ಟ ಶೇಕಡ 25ರಷ್ಟನ್ನು ಮೀಸಲು ನಿಧಿ (ರಿಸರ್ವ್ ಫಂಡ್)ಗೆ ಸೇರಿಸತಕ್ಕದ್ದು.

2. ಉಳಿದ ಲಾಭದಲ್ಲಿ ಶೇಕಡಾ 2ರಷ್ಟನ್ನು ಸಹಕಾರ ಶಿಕ್ಷಣ ನಿಧಿಗೆ ತೆಗೆದಿರಿಸತಕ್ಕದ್ದು ಮತ್ತು ಅದನ್ನು ಸಾಮಾನ್ಯ ಸಭೆಯು ನಡೆದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಕ್ಕೆ ಕಳುಹಿಸತಕ್ಕದ್ದು.

3. ಜಾತಾ ಉಳಿದ ಲಾಭವನ್ನು ಈ ಕೆಳಕಂಡಂತೆ ವಿನಿಯೋಗಿಸಬಹುದು:
   - (ಎ)ಶೇಕಡಾ 10ಕ್ಕೆ ಮೀರದ ಮೊಬಲಗನ್ನು ಕರಡು ಸಾಲದ ನಿಧಿಗೆ (ಹೋಕುಬಾಕಿ ನಿಧಿಗೆ)
   - (ಬಿ)ಶೇಕಡಾ 15ಕ್ಕೆ ಕಡಿಮೆ ಇಲ್ಲದ ಮೊಬಲಗನ್ನು ಕಟ್ಟಡದ ನಿಧಿಗೆ
   - (ಸಿ)ಶೇಕಡಾ 10ಕ್ಕೆ ಮೀರದ ಮೊಬಲಗನ್ನು ಸದಸ್ಯರ ಕ್ಷೇಮನಿಧಿಗೆ
   - (ಡಿ)ಶೇಕಡಾ 5ಕ್ಕೆ ಮೀರದ ಮೊಬಲಗನ್ನು ಸಿಬ್ಬಂದಿ ಕ್ಷೇಮನಿಧಿಗೆ
   - (ಇ)ಶೇಕಡಾ 10ಕ್ಕೆ ಮೀರದ ಮೊಬಲಗನ್ನು ಸಾಮಾಜಿಕ ಕಲ್ಯಾಣ ನಿಧಿಗೆ
   - (ಎಫ್)ಶೇಕಡಾ 10ಕ್ಕೆ ಮೀರದ ಮೊಬಲಗನ್ನು ಧರ್ಮದ ನಿಧಿಗೆ
   - (ಜಿ)ಶೇಕಡಾ 2ಕ್ಕೆ ಕಡಿಮೆ ಇಲ್ಲದ ಮೊಬಲಗನ್ನು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ., ಬೆಂಗಳೂರು ಇದರ ಸಹಕಾರ ಅಭಿವೃದ್ಧಿ ನಿಧಿಗೆ.
   - (ಹೆಚ್)ಶೇಕಡಾ 10ಕ್ಕೆ ಮೀರದ ಮೊಬಲಗನ್ನು ಮಹೋತ್ಸವ ನಿಧಿಗೆ (ಜ್ಯುಬಿಲಿ ಫಂಡ್‌ಗೆ)
   - (ಐ) ಶೇಕಡಾ 10ಕ್ಕೆ ಮೀರದ ಲಾಭಾಂಶ ಸಮೀಕರಣ ನಿಧಿಗೆ.
   - (ಜೆ)ಉಳಿದ ಲಾಭಾಂಶದಲ್ಲಿ ಪ್ರತಿ ಸದಸ್ಯರ ಹೆಸರಿನಲ್ಲೂ ಸಾಲಿನ ಅಖೈರಿಗೆ ಇರುವ ಷೇರು ಬಂಡವಾಳದ ಮೇಲೆ ಸಾಮಾನ್ಯ ನಿಕಾಯವು ನಿರ್ಧರಿಸುವ ದರದಲ್ಲಿ ಡಿವಿಡೆಂಡನ್ನು ಪಾವತಿಸಲು.
   - (ಕೆ)ಲಾಭದಲ್ಲಿ ಶೇಕಡಾ 10 ಮೀರದಂತೆ ಜ್ಯೂಬಿಲಿ ಫಂಡಿಗೆ ವಿನಿಯೋಗಿಸಲು ಅವಕಾಶವಿರತಕ್ಕದ್ದು.
   - (ಎಲ್)ಈ ಮೇಲಿನೆಲ್ಲವುಗಳನ್ನು ಹಂಚಿ ಉಳಿಯುವ ಮೊಬಲಗನ್ನು ಸಂಘದ ರಿಸರ್ವ್ ಫಂಡಿಗೆ (ಮೀಸಲು ನಿಧಿಗೆ) ಸೇರಿಸತಕ್ಕದ್ದು.